ರಾಜ್ಯದಲ್ಲಿ ವಸತಿ ರಹಿತರನ್ನು ಗುರುತಿಸಲು ಕಾರ್ಯಕ್ರಮ

2054 - ಶ್ರೀ ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿವೇಶನ ರಹಿತರನ್ನು ಹಾಗೂ ವಸತಿ ರಹಿತರನ್ನು ಗುರುತಿಸುವ ಕಾರ್ಯಕ್ರಮ ಮುಗಿದಿದೆಯೇ

ಆ) ಈ ಕಾರ್ಯಕ್ರಮ ನಡೆಸುವಾಗ ಪ್ರತಿ ತಾಲ್ಲೂಕಿನಲ್ಲಿ ಸಾಕಷ್ಟು ಜನ ಅನಕ್ಷರಸ್ಥ ಬಡವರ ಹೆಸರುಗಳು ತಪ್ಪಿಹೋದದ್ದರಿಂದ ಅವರನ್ನು ಈ ಪಟ್ಟಿಗೆ ಸೇರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ರಾಜ್ಯದಲ್ಲಿ ಈಗಾಗಲೇ ಗುರುತಿಸಲಾದ ವಸತಿಹೀನರ ಸಂಖ್ಯೆ ಎಷ್ಟು? ಉತ್ತರ ಕನ್ನಡ ಜಿಲ್ಲೆಯಲ್ಲಿರುವವರ ಸಂಖ್ಯೆ ಎಷ್ಟು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ಸಚಿವರು) :

ಅ) ಸರ್ಕಾರಿ ಆದೇಶ ಸಂ. ಹೆಚ.ಡಿ 20 ಪಿಹೆಚ್ ಎನ್ 95, ದಿ: 17-4-1995 ರ ಪ್ರಕಾರ, ವಸತಿ ಹೀನರು ಹಾಗೂ ನಿವೇಶನ ರಹಿತರನ್ನು ಗುರುತಿಸುವ ಸರ್ವೇಕ್ಷಣೆ ಮುಕ್ತಾಯಗೊಂಡಿದೆ. ಆದರೆ ಆಯಾ ಗ್ರಾಮ ಪಂಚಾಯತಗಳು ಹಾಗೂ ನಗರಸಭೆಗಳು ಸ್ಥಳೀಯ ಸಂಸ್ಥೆಗಳ ಕಾಯ್ದೆ ಪ್ರಕಾರ ಪ್ರತಿ ಆರು ತಿಂಗಳಿಗೆ ಗ್ರಾಮ ಸಭೆಗಳ ಮೂಲಕ ಅರ್ಹ ಫಲಾನುಭವಿಗಳನ್ನು ಗುರುತಿಸಲು ಅವಕಾಶವಿದೆ.

ಆ) ಹೌದು.

ಇ) ವಸತಿ ರಹಿತರ ಸಂಖ್ಯೆ - 7,83,068

ನಿವೇಶನ ರಹಿತ ಸಂಖ್ಯೆ - 11,31,294

ಒಟ್ಟು - 19,14,362

ಉತ್ತರ ಕನ್ನಡ ಜಿಲ್ಲೆಯಲ್ಲಿ

ವಸತಿ ರಹಿತರ ಸಂಖ್ಯೆ - 18,921

ನಿವೇಶನ ರಹಿತರ ಸಂಖ್ಯೆ - 27,554

ಒಟ್ಟು - 46,475

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ವಿವಿಧ ಅಲ್ಪಸಂಖ್ಯಾತರಿಗೆ ವಿತರಿಸಲಾದ ಹಣ

2057 - ಶ್ರೀ ಜೆ.ಎ. ಫರ್ನಾಂಡೀಸ್ (ನಾಮನಿರ್ದೇಶನ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಯಂ ಉದ್ಯೋಗ, ಕಲ್ಯಾಣ ಯೋಜನೆ ಇತ್ಯಾದಿಗಳಡಿಯಲ್ಲಿ ಅಲ್ಪಸಂಖ್ಯಾತರುಗಳಿಗೆ ವಿತರಿಸಲಾದ ಒಟ್ಟು ಹಣದ ಮೊತ್ತವೆಷ್ಟು.

ಆ) ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ.

ಇ) ಅವುಗಳಲ್ಲು ಕ್ರಿಶ್ಚಿಯನ್ ಹಾಗೂ ಆಂಗ್ಲೊ ಇಂಡಿಯನ್ ಅಲ್ಪಸಂಖ್ಯಾತರ ಜನಾಂಗಗಳಿಗೆ ಸೇರಿದ ಫಲಾನುಭವಿಗಳ ಸಂಖ್ಯೆ

ಈ) 1995-96ನೇ ಸಾಲಿನನಲ್ಲಿ ವಿತರಿಸಲು ಮಾಡಲು ಉದ್ದೇಶಿಸಿರುವ ಹಣದ ಮೊತ್ತ

ಉ) ಇದರಲ್ಲಿ ಆಂಗ್ಲೊ ಇಂಡಿಯನ್ ಜನಾಂಗದವರಿಗೆ ನಿಗದಿಗೊಳಿಸಲಾಗುವ ಶೇಕಡವಾರು ಮೊತ್ತವೆಷ್ಟು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸ್ವಯಂ ಉದ್ಯೋಗ, ಕಲ್ಯಾಣ ಯೋಜನೆ ಇತ್ಯಾದಿಗಳಡಿಯಲ್ಲಿ ಅಲ್ಪಸಂಖ್ಯಾತರಿಗೆ ಒಟ್ಟು ರೂ. 3528.47 ಲಕ್ಷಗಳನ್ನು ದಿನಾಂಕ; 31.7.95 ರವರೆಗೆ ವಿತರಿಸಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಒಟ್ಟು 14708 ಫಲಾನುಭವಿಗಳು ಸೌಲಭ್ಯ ಪಡೆದಿರುತ್ತಾರೆ.

ಇ) ಅವರುಗಳಲ್ಲಿ 1355 ಕ್ರಿಶ್ಚಿಯನ್ನರು ಹಾಗೂ 11 ಆಂಗ್ಲೊ ಇಂಡಿಯನರು ಈ ಸೌಲಭ್ಯವನ್ನು ಪಡೆದಿದ್ದಾರೆ.

ಈ) 1995-96ರ ಸಾಲಿನಲ್ಲಿ ರೂ. 7.25 ಕೋಟಿಗಳನ್ನು ಅನುವು ಮಾಡಲಾಗಿದ್ದು, 16000 ಫಲಾನುಭವಿಗಳಿಗೆ ನೆರವು ನೀಡಲು ಉದ್ದೇಶಿಸಲಾಗಿದೆ.

ಉ) ಆಂಗ್ಲೊ ಇಂಡಿಯನ್ಸ್ ಜನಾಂಗದವರಿಗಾಗಿ ಪ್ರತ್ಯೇಕವಾಗಿ ಶೇಕಡಾವಾರುವಾಗಿ ವಿಂಗಡಿಸಿರುವುದಿಲ್ಲ. ಆದರೆ ಕ್ರಿಶ್ಚಿಯನರಿಗೆ ನಿಗದಿಗೊಳಿಸಲಾದ ಶೇ 20 ರಲ್ಲಿ ಆಂಗ್ಲೊ ಇಂಡಿಯನರುಗಳು ಕೂಡಾ ಸೇರಿರುತ್ತಾರೆ.

ಮುಧೋಳ ತಾಲ್ಲೂಕಿನ ಕಬ್ಬು ಬೆಳೆಗಾರರ ಬಗ್ಗೆ

2059 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಧೋಳ್ ತಾಲ್ಲೂಕಿನ ಕಬ್ಬುಬೆಳೆಗಾರರು ತಾವು ಗೆಳೆದ ಕಬ್ಬನ್ನು ಹೊರ ರಾಜ್ಯಕ್ಕೆ ಕಳುಹಿಸಲು ಪರವಾನಗಿ ಕೋರಿ ಮನವಿ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸರ್ಕಾರದ ಕ್ರಮಗಳೇನು ?